ಪ್ಲಾಸ್ಟಿಕ್ ಹಾಕುವ ಬದಲು ಗಾಜನ್ನು ರೀಸೈಕಲ್ ಮಾಡಿ ಬಳಸಬಹುದು.

### ಕಸ ನಿರ್ವಹಣೆ: ಜಗತ್ತಿಗೆ ಮಾದರಿ

ಕಸದ ಉದ್ಯಮ ಅಂತರರಾಷ್ಟ್ರೀಯ ಆರ್ಥಿಕತೆಯ ಭಾಗವಾಗಿದೆ. ಹಾಗಿದ್ದ ಮೇಲೆ ಸರಿಯಾದ ಕಸ ನಿರ್ವಹಣೆ ಸಾಧ್ಯವೇ ಇಲ್ಲವೇ?

ಏಕಿಲ್ಲ? ಇಡೀ ಜಗತ್ತಿಗೆ ಮಾದರಿಯಾಗುವಂತೆ ಕೆಲಸ ಮಾಡಿ ಅತಿ ಹೆಚ್ಚು ಪ್ರಮಾಣದ ಕಸವನ್ನು ರೀಸೈಕಲ್ ಮಾಡುತ್ತಾ ತಮ್ಮ ವಾತಾವರಣವನ್ನು ಶುದ್ಧವಾಗಿಟ್ಟುಕೊಂಡಿರುವ ಹಲವು ದೊಡ್ಡ ನಗರಗಳು ನಮ್ಮ ಕಣ್ಣ ಮುಂದೆ ಇವೆ. ಸ್ವಿಟ್ಜರ್ಲೆಂಡ್, ವಿಯೆನ್ನಾ, ಸಿಂಗಪುರ, ಹೆಲ್ಸಿಂಕಿ ಮತ್ತು ಜಪಾನಿನ ಕೊಬೆ, ಕಮಿಕಸ್ಟು, ನಮ್ಮ ಛತ್ತೀಸ್‌ಗಡ ರಾಜ್ಯದ ಅಂಬಿಕಾಪುರ, ಪುಣೆ ನಗರಗಳು ಇಡೀ ವಿಶ್ವಕ್ಕೆ ಮಾದರಿ ಎನಿಸಿವೆ.

### ಜ್ಯೂರಿಚ್ ವೇಸ್ಟ್ ಮೇನೇಜ್‌ಮೆಂಟ್


ಸ್ವಿಟ್ಜರ್ಲೆಂಡಿನಲ್ಲಿ 'ಮಾಲಿನ್ಯ ಮಾಡುವವನೇ ದಂಡ ಕಟ್ಟಬೇಕು' ಎಂಬ ನಿಯಮವಿದೆ. ದಂಡದ ಪ್ರಮಾಣ ದರವು ಕಸವೆಂದು ಬಿಸಾಕಿರುವ ವಸ್ತುವಿನ ಮಾರುಕಟ್ಟೆಯ ಬೆಲೆಯಷ್ಟೇ ಇರುತ್ತದೆ! ಕಳೆದ 40 ವರ್ಷಗಳಿಂದ ಕಸ ನಿರ್ವಹಣೆಯನ್ನು ನೋಡಿಕೊಳ್ಳುತ್ತಿರುವ ಜ್ಯೂರಿಚ್ ವೇಸ್ಟ್ ಮ್ಯಾನೇಜ್ಮೆಂಟ್ ಇಲಾಖೆಯು ಕಸ ಬಿಸಾಕಲು 'ಜ್ಯೂ ರಿ ಸ್ಯಾಕ್' ಎಂಬ ಚೀಲಗಳನ್ನು ಬಳಸಬೇಕೆಂಬ ನಿಯಮ ಜಾರಿಗೆ ತಂದಿದೆ.

ದಿನಸಿ ಅಂಗಡಿಗಳಿಂದ ಈ ಚೀಲಗಳನ್ನು ಖರೀದಿಸಿ ಅದರ ಮೂಲಕವೇ ಕಸ ವಿಲೇವಾರಿ ಮಾಡಬೇಕು. ಈ ಚೀಲಗಳ ದರವು ತುಂಬಾ ಹೆಚ್ಚಿರುವುದರಿಂದ ಜನರು ಕಸ ಉತ್ಪತ್ತಿ ಮಾಡಲು ಹಿಂದೇಟು ಹಾಕುವಂತಾಗಿದೆ. ಇದರಿಂದಾಗಿ ದೇಶದ ಪ್ರಜೆಯು ಉತ್ಪಾದಿಸುವ ಸರಾಸರಿ ಕಸದ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. 'ಹೇಗೆ ಕಸ ಎಸೆಯುತ್ತೀಯೋ ಹಾಗೆ ಶುಲ್ಕ ಪಾವತಿ ಮಾಡು' ಎಂಬ ನಿಯಮವನ್ನು ಜ್ಯೂರಿಚ್ ಸರ್ಕಾರವು ಜಾರಿಗೆ ತಂದಿದೆ. ಇಲ್ಲಿ ಶೇ.5 4ರಷ್ಟು ಕಸ ರೀಸೈಕಲ್ ಆಗುತ್ತದೆ.

### ಪ್ರವಾಸಿ ಆಕರ್ಷಣೆಯ 'ಇನ್ಸಿನರೇಟರ್'

ವಿಶೇಷವಾದ ಪ್ರವಾಸಿ ಆಕರ್ಷಣೆಯೊಂದು ಆಸ್ಟ್ರಿಯಾ ದೇಶದ ವಿಯೆನ್ನಾ ನಗರದಲ್ಲಿದೆ. ನಗರದ ಮಧ್ಯ ಭಾಗದಲ್ಲಿ ಹೊಳೆಯುವ ಬಂಗಾರದ ಚೆಂಡಿನಂತಿರುವ ಇದು ಕ್ರಾಂತಿಯನ್ನು ನೆನಪಿಸುವ ಅಥವಾ ಯುದ್ಧ ಗೆದ್ದ ನೆನಪಿನ ಸ್ಮಾರಕವಲ್ಲ. ಇತಿಹಾಸಕ್ಕೆ ಸಂಬಂಧಿಸಿದ ಜಾಗವಲ್ಲ. ಇದೊಂದು ಕಸ ದಹಿಸುವ ಘಟಕ. ಇದರ ಹೆಸರು ಸ್ಪಿಟ್ಟಲಾ ಇನ್ಸಿನರೇಟರ್. ತಂತ್ರಜ್ಞಾನ ಮತ್ತು ವಾಸ್ತುಶಿಲ್ಪ, ವಿಜ್ಞಾನದ ಸುಂದರ ಸಂಗಮದಂತಿರುವ ಈ 'ಕಸ ಸುಡುವ' ಘಟಕವು ವಿಯೆನ್ನಾ ನಗರದ ಪ್ರಮುಖ ಪ್ರವಾಸಿ ಆಕರ್ಷಣೆಗಳಲ್ಲೊಂದು.

ಸದಾ ಶೀತಲ ವಾತಾವರಣವಿರುವ ಈ ಊರಿನಲ್ಲಿ ಪ್ರತಿ ಮನೆಯಲ್ಲೂ ಹೀಟಿಂಗ್ ವ್ಯವಸ್ಥೆ ಇರುತ್ತದೆ. ವರ್ಷಕ್ಕೆ 2,70,000 ಟನ್ ಕಸವನ್ನು ದಹಿಸುವ ಕ್ಷಮತೆ ಇರುವ ಈ ಘಟಕವು ನಗರದ ಎಲ್ಲಾ ಮನೆಗಳ ಹೀಟಿಂಗ್ ವ್ಯವಸ್ಥೆಗೆ ಬೇಕಾದ ಬಿಸಿಯನ್ನು ನೀಡುತ್ತದೆ. 2040ರ



ಬ್ರೆಜಿಲ್‌ನ ಬ್ರೆಸಿಲಿಯಾದಲ್ಲಿ ಪ್ರದರ್ಶನಗೊಂಡ 'ಪ್ಲಾಸ್ಟಿಕ್ ಸುನಾಮಿ' ಕಲಾಕೃತಿ.



## ಪ್ಲಾಸ್ಟಿಕ್ ಕಸದ ಸುತ್ತ ಹುನ್ನಾರದ ಹುತ್ತ

ಪ್ಲಾಸ್ಟಿಕ್ ಉತ್ಪಾದನೆ ಮತ್ತು ರೀಸೈಕಲ್‌ವರೆಗಿನ ಅವಧಿಯಲ್ಲಿ ಹೊಮ್ಮುವ ಅಗಾಧ ಪ್ರಮಾಣದ ಶಾಖವರ್ಧಕ ಅನಿಲಗಳು ಭೂಮಿ ಬಿಸಿಯನ್ನು ತ್ವರಿತವಾಗಿ ಏರಿಸುತ್ತವೆ. ಇದರ ತಡೆಗಾಗಿ 300 ಶತಕೋಟಿ ಡಾಲರ್ ಹಣ ವ್ಯಯವಾಗುತ್ತಿದೆ. ಶೇ. 99ರಷ್ಟು ಪ್ಲಾಸ್ಟಿಕ್ ಅನ್ನು ಪೆಟ್ರೋ ರಾಸಾಯನಿಕಗಳಿಂದ ಉತ್ಪಾದಿಸಲಾಗುತ್ತದೆ. ಪ್ಲಾಸ್ಟಿಕ್ ಮಾಲಿನ್ಯ ತಡೆ ನಿರ್ಣಯಕ್ಕೆ ದೇಶಗಳು ಒಪ್ಪಿಗೆ ನೀಡುವುದನ್ನು ಪೆಟ್ರೋ ಕೆಮಿಕಲ್ ಕಂಪನಿಗಳು ಒಪ್ಪುತ್ತಿಲ್ಲ. ನೈರೋಬಿಯ ಸಭೆಯ ನಿರ್ಣಯ ಭೂಮಿಯ ಸ್ವಾಸ್ಥ್ಯಕ್ಕಾಗಿ ನಾವು ಮಾಡುವ ತ್ಯಾಗ ಎಂದು ಗೊತ್ತಿದ್ದರೂ ಉತ್ಪಾದನೆಗೆ ಕಚ್ಚಾ ಸಾಮಗ್ರಿ ಒದಗಿಸುವ ತೈಲ, ಅನಿಲ ಮತ್ತು ಕಲ್ಲಿದ್ದಲು ಕ್ಷೇತ್ರಗಳು ಒಲವು ತೋರಿಸುತ್ತಿಲ್ಲ. ಹೇಗಾದರೂ ಮಾಡಿ ನಿರ್ಣಯವನ್ನು ನಿತ್ರಾಣಗೊಳಿಸಬೇಕಲ್ಲ ಎಂದು ಚಿಂತಿಸುವ ಉದ್ಯಮಗಳು ನಾವು ಪ್ಲಾಸ್ಟಿಕ್ ಅನ್ನು ಇಂಧನವನ್ನಾಗಿ ಪರಿವರ್ತಿಸುತ್ತೇವೆ ಅಂತಲೋ ವಾತಾವರಣಕ್ಕೆ ಹಾನಿಯಾಗದಂತೆ ದಹಿಸುತ್ತೇವೆ ಅಂತಲೋ ಅರೆಬೆಂದ ಪರಿಹಾರ ಸೂಚಿಸುತ್ತಿವೆ. ಕೆಲವು ವರ್ಷಗಳ ಹಿಂದೆ ಯೂನಿಲಿವರ್ ಕಂಪನಿಯವರು ಪ್ಲಾಸ್ಟಿಕ್ ಚೀಲ ಪಟ್ಟಣಗಳನ್ನು ಸುರಕ್ಷಿತವಾದ ರೀತಿಯಲ್ಲಿ ತೈಲವನ್ನಾಗಿ ಪರಿವರ್ತಿಸುತ್ತೇವೆ ಎಂದು ಇಂಡೊನೇಷ್ಯಾದಲ್ಲಿ ಭಾರೀ ಉಮೇದಿನಿಂದ ಕಂಪನಿ ಪ್ರಾರಂಭಿಸಿದ್ದರು. ಅದೀಗ ಕೆಲಸ ನಿಲ್ಲಿಸಿದೆ.

ಪ್ಲಾಸ್ಟಿಕ್ ತ್ಯಾಜ್ಯ ನಿಯಂತ್ರಿಸಲು ನಮ್ಮಲ್ಲಿ 'ಎಕ್ಸ್‌ಟೆಂಡೆಡ್ ಪ್ರೊಡ್ಯೂಸರ್ ರೆಸ್ಪಾನ್ಸಿಬಿಲಿಟಿ' (ಉತ್ಪಾದಕನ ಮುಂದುವರೆದ ಜವಾಬ್ದಾರಿ) ನೀತಿಯನ್ನು ಜಾರಿಗೊಳಿಸಲಾಗಿದೆ. ಇದರ ಪ್ರಕಾರ ಯಾವುದೇ ಕಂಪನಿಯು ಒಂದು ವರ್ಷದಲ್ಲಿ ಎಷ್ಟು ಪ್ಲಾಸ್ಟಿಕ್ ಉತ್ಪಾದಿಸುತ್ತದೆಯೋ ಅಷ್ಟೇ ಪ್ರಮಾಣದ ಕಸವನ್ನು ಹಿಂಪಡೆಯಬೇಕು. ಇದನ್ನು ಸರಿಯಾಗಿ ಪಾಲಿಸುವ ಕಂಪನಿಗಳಿಗೆ ಕ್ರೆಡಿಟ್ ನೀಡಲಾಗುತ್ತದೆ. ಉತ್ಪಾದಿಸಿದ್ದಕ್ಕಿಂತ ಹೆಚ್ಚು ಕಸ ಸಂಗ್ರಹಿಸುವ ಕಂಪನಿಗಳು ತಮಗೆ ಸಿಗುವ ಕ್ರೆಡಿಟ್‌ಗಳನ್ನು ಅಷ್ಟಾಗಿ ಕಸ ಸಂಗ್ರಹಿಸದ ಕಂಪನಿಗಳಿಗೆ ವರ್ಗಾಯಿಸಿ ಹಣ ಸಂಪಾದಿಸಬಹುದು. ಈ ನಿಯಮವನ್ನು ಪಾಲಿಸುವ ಕಂಪನಿಗಳು ಬೆರಳೆಣಿಕೆಯಷ್ಟು ಮಾತ್ರ.

ಪ್ಲಾಸ್ಟಿಕ್ ಕಸದ ಆಮದನ್ನು 2015ರಲ್ಲಿ ನಿಷೇಧಿಸಿದ್ದ ಕೇಂದ್ರ ಸರ್ಕಾರ ನಾಲ್ಕು ವರ್ಷಗಳ ನಂತರ ನಿಷೇಧವನ್ನು ತೆಗೆದುಹಾಕಿದೆ. 2022ರಲ್ಲಿ 80,000 ಟನ್‌ನಷ್ಟು ಪ್ಲಾಸ್ಟಿಕ್ ತ್ಯಾಜ್ಯವನ್ನು ನಾವು ಬೇರೆ ದೇಶಗಳಿಂದ ಆಮದು ಮಾಡಿಕೊಂಡಿದ್ದೇವು. ನಾವೇ ಪ್ರತಿನಿತ್ಯ 26 ಸಾವಿರ ಟನ್ ಪ್ಲಾಸ್ಟಿಕ್ ಕಸ ಉತ್ಪಾದಿಸುತ್ತೇವೆ. ವಾಸ್ತವ ಹೀಗಿರುವಾಗ ಹೊರಗಿನಿಂದ ಏಕೆ ಆಮದು ಮಾಡಿಕೊಳ್ಳಬೇಕು? ಏಕೆಂದರೆ, ವಿದೇಶದ ಪ್ಲಾಸ್ಟಿಕ್ ತ್ಯಾಜ್ಯವು ಸ್ಥಳೀಯ ತ್ಯಾಜ್ಯದ ದರಕ್ಕಿಂತ ಕಡಿಮೆ ಬೆಲೆಯಲ್ಲಿ ದೊರಕುತ್ತದೆ.